# ಕರ್ನಾಟಕ ಲೋಕಾಯುಕ್ತ

ನಂ.ಕಂಪ್ಲೆಂಟ್/ಉಪಲೋಕ್/ಎಂವೈಎಸ್–1341/2017/ಪಿಪಿ

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀಧಿ,
ಬೆಂಗಳೂರು.
ದಿನಾಂಕ : 22/01/2018

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(1) ರನ್ವಯ ವರದಿ

ವಿಷಯ: ಶ್ರೀ ಡಿ.ಎಂ. ಪೂಣಚ್ಚ ಬಿನ್ ಲೇಟ್ ಡಿ.ಮುತ್ತಣ್ಣ, ಬಾಡಗ ಗ್ರಾಮ, ಬೇತ್ರಿ ಅಂಚೆ, ಮಡಿಕೇರಿ ತಾಲ್ಲೂಕು, ಕೊಡಗು ಜಿಲ್ಲೆ ಇವರು ಈ ಸಂಸ್ಥೆಗೆ ಸಲ್ಲಿಸಿದ ದೂರಿನನ್ವಯ ಕಾನೂನು ರೀತ್ಯ ಕ್ರಮ ಜರುಗಿಸಿ ವರದಿ ಸಲ್ಲಿಸುವ ಬಗ್ಗೆ.

*–*–*

ದೂರುದಾರರಾದ ಶ್ರೀ ಡಿ.ಎಂ. ಪೂಣಚ್ಚ ಬಿನ್ ಲೇಟ್ ಡಿ.ಮುತ್ತಣ್ಣ, ಬಾಡಗ ಗ್ರಾಮ, ಬೇತ್ರಿ ಅಂಚೆ, ಮಡಿಕೇರಿ ತಾಲ್ಲೂಕು, ಕೊಡಗು ಜಿಲ್ಲೆ ಇವರು ಪೊಲೀಸ್ ಇನ್ಸ್‌ಪೆಕ್ಟರ್, ಮಡಿಕೇರಿ ಗ್ರಾಮಾಂತರ ಪೊಲೀಸ್ ಠಾಣೆ, ಮಡಿಕೇರಿ, ಕೊಡಗು ಜಿಲ್ಲೆ ರವರ ವಿರುದ್ಧ ದೂರನ್ನು ಸಲ್ಲಿಸಿರುತ್ತಾರೆ. ಸದರಿ ದೂರಿನ ಆಧಾರದ ಮೇಲೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 9 ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ತನಿಖೆಗೆ ಆದೇಶಿಸಲಾಗಿರುತ್ತದೆ.

2. ದೂರಿನಂಶಗಳೇನೆಂದರೆ, ಶ್ರೀ ಡಿ.ಪಿ. ಲೋಕೇಶ್ ರವರು ದಿನಾಂಕ 11/03/2017 ರಿಂದ ಪ್ರತಿ ದಿನ ಕಾವೇರಿ ನದಿಯ ಬೆತರಿ ಬಳಿ ಮರಳು ದಂಧೆಯನ್ನು ವಾಹನ ಸಂಖ್ಯೆ: ಕೆಎ–12–ಬಿ–1491 ಮುಖಾಂತರ ಮಾಡುತ್ತಿದ್ದಾರೆಂದು, ಎದುರುದಾರರಿಗೆ ಈ ವಿಷಯ ಎಲ್ಲಾ ಗೊತ್ತಿದ್ದರೂ ಸಹ, ಕಾನೂನು ರೀತ್ಯಾ ಯಾವುದೇ ಕ್ರಮ ಕೈಗೊಂಡಿರುವುದಿಲ್ಲವೆಂದು ಇತ್ಯಾದಿಯಾಗಿ ಆಪಾದಿಸಿರುತ್ತಾರೆ.

3. ಎದುರುದಾರರು ತಮ್ಮ ಆಕ್ಷೇಪಣೆಯನ್ನು ಸಲ್ಲಿಸಿದ್ದು, ಸದರಿ ಆಕ್ಷೇಪಣೆಯಲ್ಲಿ "*ಎಂ. ಬಾಡಗ ಗ್ರಾಮಕ್ಕೆ ಭೇಟಿ ನೀಡಿ ಗ್ರಾಮಸ್ಥರನ್ನು ಮತ್ತು ಬೀಟ್ ಸದಸ್ಯರನ್ನು ಗುಪ್ತವಾಗಿ ವಿಚಾರಣೆ ಮಾಡಿದಲ್ಲೂ ಅಕ್ರಮವಾಗಿ ಮರಳನ್ನು ವಾಹನಗಳಲ್ಲಿ ಸಾಗಿಸುವ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ ಎಂಬುದಾಗಿ ತಿಳಿದು ಬಂದಿರುತ್ತದೆ. ಎಂ. ಬಾಡಗ ಗ್ರಾಮದ ಲೋಕೇಶ್ ಎಂಬುವರು ಅವರ ಮನೆಯ ಬಳಿಯಲ್ಲಿ ಮರಳನ್ನು ಸಂಗ್ರಹಿಸಿದ್ದು, ಇದು ಅನಧಿಕೃತ ಎಂದು ಕಂಡು ಬಂದ ಮೇರೆ ದಿ: 28/02/2017 ರಂದು*

*ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಅಧಿಕಾರಿಯವರು ಲೋಕೇಶ್‌ರವರಿಗೆ ರೂ.50,000/- ದಂಡ ವಿಧಿಸಿರುತ್ತಾರೆ. ಅಕ್ರಮ ಮರಳು ಸಾಗಾಟದ ಬಗ್ಗೆ ಕ್ರಮ ಕೈಗೊಳ್ಳುವಂತೆ ಜ್ಞಾಪನ ನೀಡಲಾಗಿದೆ. ಶ್ರೀ ಡಿ.ಪಿ ಲೋಕೇಶ್ ರವರು ಅಕ್ರಮ ಮರಳು ತೆಗೆಯುವುದು ಅಥವಾ ಸಾಗಾಟ ಮಾಡುವ ಬಗ್ಗೆ ನಿಗಾ ಇಡಲಾಗಿದೆ"* ಎಂದು ನಮೂದಿಸಿರುತ್ತಾರೆ.

4. ದೂರುದಾರರು ಎದುರುದಾರರ ಆಕ್ಷೇಪಣೆಗೆ ತಮ್ಮ ಪ್ರತ್ಯುತ್ತರವನ್ನು ತಮ್ಮ ಪತ್ರ ದಿನಾಂಕ 09/09/2017 ರ ಮೂಲಕ ಈ ಕೆಳಕಂಡಂತೆ ಸಲ್ಲಿಸಿರುತ್ತಾರೆ:-

> *"ತನಿಖೆ ಮಾಡಲು ಪೋಲೀಸ್‌ರವರು ಜುಲೈ ತಿಂಗಳಲ್ಲಿ ಮಳೆಗಾಲದಲ್ಲಿ ಸ್ಥಳ ತನಿಖೆ ಮಾಡಿದ್ದು, ಮರಳು ದಂಧೆಯು ನವೆಂಬರ್ ನಿಂದ ಮೇವರೆಗೂ ನಡೆಯುತ್ತಿದ್ದು, ಸದರಿ ತನಿಖೆ ಸುಳ್ಳಿನಿಂದ ಕೂಡಿರುತ್ತದೆ. ಶ್ರೀ ಡಿ.ಪಿ. ಲೋಕೇಶ್‌ರವರು ಮರಳು ದಂಧೆ ಮಾಡುತ್ತಿದ್ದಾಗ ಕ್ರಮ ಜರುಗಿಸಲು ದೂರು ಸಲ್ಲಿಸಿದ್ದು, ಸದರಿ ಲೋಕೇಶ್‌ರವರಿಗೆ ಮರಳು ದಂಧೆ ಮಾಡಲು ಇದ್ದ ಪರವಾನಗಿಯನ್ನು ಹಾಜರುಪಡಿಸಿಲ್ಲ. ಆತನ ವಿರುದ್ಧ ಯಾವುದೇ ಕ್ರಮವನ್ನು ಎದುರುದಾರರು ಜರುಗಿಸಿರುವುದಿಲ್ಲ. ತನಿಖಾಧಿಕಾರಿಗಳು ವಿಚಾರಿಸಿರುವ ಸಾಕ್ಷಿದಾರರು ಲಾರಿ ಚಾಲಕರಿದ್ದು, ಸದರಿಯವರು ಸಹ ಅಕ್ರಮವಾಗಿ ಮರಳು ಸಾಗಾಣಿಕೆ ಮಾಡುತ್ತಾರೆ. ತನಿಖಾಧಿಕಾರಿಗಳು ಫಿರ್ಯಾದುದಾರರಾದ ನಮ್ಮನ್ನು ವಿಚಾರಣೆ ಮಾಡಿರುವುದಿಲ್ಲ. ಗಣಿ ಮತ್ತು ಭೂ ಇಲಾಖೆಯವರು ದಿ:28/02/2017 ರಂದು ಸದರಿ ಲೋಕೇಶ್‌ರಿಗೆ ಅಕ್ರಮ ಮರಳು ದಂಧೆ ಮಾಡಿದಕ್ಕೆ ನೋಟೀಸು ನೀಡಿದ್ದು, ಸದರಿ ನೋಟೀಸಿನಂತೆ ರೂ.50,000/- ದಂಡ ವಿಧಿಸಿದದರೂ ಲೋಕೇಶ್‌ರವರು ಅದೇ ಮರಳು ದಂಧೆ ಮಾಡುತ್ತಿರುತ್ತಾರೆಂದು ದೂರು ಸಲ್ಲಿಸಿದ್ದರೂ ಎದುರುದಾರರು ಕ್ರಮ ಜರುಗಿಸಿಲ್ಲ. ಕಾರಣ, ಪ್ರತ್ಯೇಕ ತನಿಖೆ ಮಾಡಲು ಕೋರಿರುತ್ತಾರೆ".*

5. ಫಿರ್ಯಾದುದಾರರ ವಕೀಲರು ನೀಡಿರುವ ನೋಟೀಸ್ ದಿ:30/11/2017 ಅನ್ನು ಈ ಸಂಸ್ಥೆಗೆ ಎದುರುದಾರರಿಗೆ ಹಾಗೂ ಗಣಿ ಮತ್ತು ಭೂ ವಿಜ್ಞಾನ ಇಲಾಖಾ ಅಧಿಕಾರಿಗಳಿಗೆ ನೀಡಿದ್ದು, ಸದರಿ ನೋಟೀಸಿನಲ್ಲಿ ಪ್ರಸ್ತುತ ದೂರು ದಾಖಲಾಗಿದ್ದರೂ ಅಕ್ರಮ ಮರಳು ದಂಧೆ ನಡೆಯುತ್ತಿದೆ, ಪರಿಸರ ಹಾನಿಯಾಗುತ್ತಿದೆ ಎದುರುದಾರರು ಮತ್ತು ಗಣಿ ಮತ್ತು ಭೂ ವಿಜ್ಞಾನ ಅಧಿಕಾರಿಗಳು ಸೂಕ್ತ ಕ್ರಮ ಜರುಗಿಸಿ ಅಕ್ರಮ ಗಣಿಗಾರಿಕೆ ತಡೆಯುತ್ತಿಲ್ಲ. ಕಾರಣ, ಸೂಕ್ತ ಕ್ರಮ ಜರುಗಿಸಲು ಮತ್ತು ಅಕ್ರಮ ಗಣಿಗಾರಿಕೆಯನ್ನು ತಡೆಯುವಂತೆ ನೋಟೀಸು ನೀಡಿರುತ್ತಾರೆ.

6. ಲಭ್ಯವಿರುವ ದಾಖಲೆ ಹಾಗೂ ಮಾಹಿತಿಯಿಂದ ಫಿರ್ಯಾದುದಾರರ ಪ್ರತ್ಯುತ್ತರ ಹಾಗೂ ಅವರ ವಕೀಲರ ನೋಟೀಸಿನ ಅಂಶಗಳನ್ನು ಪರಿಗಣಿಸಲಾಗಿ, 2017ನೇ ಸಾಲಿನ ಕೊನೆಯ ಅವಧಿಯವರೆಗೂ ಕಾವೇರಿ ನದಿಯ ಬೇತ್ರಿ ಬಳಿ ಮರಳು ದಂಧೆ ಅವ್ಯಾಹತವಾಗಿ ನಡೆಯುತ್ತಿರುವುದು ಮೇಲ್ನೋಟಕ್ಕೆ ಕಂಡು ಬಂದಿರುತ್ತದೆ. ಪರಿಸರದ ದೃಷ್ಟಿಯಿಂದ ಹಾಗೂ ಸಾಮಾಜಿಕ ದೃಷ್ಟಿಯಿಂದ ಅಕ್ರಮ ಮರಳು ದಂಧೆಯನ್ನು ನಡೆಸದಂತೆ ತಡೆ ಒಡ್ಡುವುದು ಅತ್ಯಾವಶ್ಯಕವಾಗಿರುತ್ತದೆ.

7. ಮೇಲೆ ಚರ್ಚಿಸಿದ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ, 12(1)ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, **ಎಂ. ಬಾಡಗ ಗ್ರಾಮದಲ್ಲಿ ಬೇತ್ರಿ ಬಳಿಯ ಕಾವೇರಿ ನದಿಯಲ್ಲಿ ಅಕ್ರಮವಾಗಿ ಮರಳು ತೆಗೆಯದಂತೆ ಪರಿಸರ ಸಂರಕ್ಷಣೆ ಕ್ರಮಗಳನ್ನು ಕೈಗೊಂಡು ಸಾಮಾಜಿಕ ನ್ಯಾಯ ಒದಗಿಸುವಂತೆ ಕಾನೂನಿನಡಿ ಸೂಕ್ತ ಕ್ರಮ ಜರುಗಿಸಲು ಸರ್ಕಾರಕ್ಕೆ ಈ ಮೂಲಕ ಶಿಫಾರಸ್ಸು ಮಾಡಲಾಗಿದೆ.** ಈ ಬಗ್ಗೆ **ಒಂದು ತಿಂಗಳೊಳಗೆ** ಕ್ರಮ ಕೈಗೊಂಡು, ಕೈಗೊಂಡ ಕ್ರಮವನ್ನು ಈ ಸಂಸ್ಥೆಗೆ ವರದಿ ಸಲ್ಲಿಸುವುದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

Sd/- 24/1/18

**(ನ್ಯಾಯಮೂರ್ತಿ ಸುಭಾಷ್ ಬಿ. ಆಡಿ)**
**ಉಪಲೋಕಾಯುಕ್ತರು,**
**ಕರ್ನಾಟಕ ರಾಜ್ಯ,**
**ಬೆಂಗಳೂರು.**